


بسم اللهِ الرّحمٰنِ الرّحيم

# ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಜಮಾಅತಿಗೆ ವಿನಯ ಮತ್ತು ನಮ್ರತೆಯನ್ನು ಅಳವಡಿಸಿಕೊಳ್ಳುವಂತೆ ನೀಡಿದ ಉಪದೇಶ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **29–05–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರ ದಾಸ್ಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ವಿನಯ ಮತ್ತು ನಮ್ರತೆಯ ಕೆಲವು ಘಟನೆಗಳು ಹಾಗೂ ತಮ್ಮ ಜಮಾಅತಿಗೆ ವಿನಯ ಮತ್ತು ನಮ್ರತೆಯನ್ನು ಅಳವಡಿಸಿಕೊಳ್ಳುವಂತೆ ಅವರು ನೀಡಿದ ಉಪದೇಶದ ಕುರಿತು ಇಂದು ನಾನು ಕೆಲವು ವಿಷಯಗಳನ್ನು ವಿವರಿಸಲಿದ್ದೇನೆ. ಹಝ್ರತ್ ಮಸೀಹ್ ಮೌಊದ್(ಅ)ರ ವಿನಯವನ್ನು ಕಂಡು ಅಲ್ಲಾಹನು ಸ್ವತಃ ಅದಕ್ಕೆ ಪ್ರಮಾಣಪತ್ರವನ್ನು ನೀಡಿದನು. 18 ಮಾರ್ಚ್ 1907ರಂದು ಹಝ್ರತ್ ಮಸೀಹ್ ಮೌಊದ್(ಅ)ರಿಗೆ 'ನಿನ್ನ ವಿನಮ್ರ ಮಾರ್ಗಗಳು ಅವನಿಗೆ (ಅಲ್ಲಾಹನಿಗೆ) ಇಷ್ಟವಾಯಿತು.' ಎಂಬ ದಿವ್ಯವಾಣಿ ಲಭಿಸಿತು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನನಗೆ ವ್ಯಕ್ತಪಡಿಸಲಾಗಿರುವುದೇನೆಂದರೆ, ನಾನು ನನ್ನ ನಮ್ರತೆ, ವಿನಯ, ದೇವನ ಮೇಲಿನ ವಿಶ್ವಾಸ, ತ್ಯಾಗ, ದೃಷ್ಟಾಂತಗಳು ಮತ್ತು ದೈವಿಕ ಪ್ರಕಾಶದ ಆಧಾರದಲ್ಲಿ ಮೊದಲನೇ ಮಸೀಹ್‌ರ ಜೀವಿತಕ್ಕೆ ಮಾದರಿಯಾಗಿದ್ದೇನೆ ಮತ್ತು ನನ್ನ ಸ್ವಭಾವ ಹಾಗೂ ಈಸಾ ಮಸೀಹ್‌ರ ಸ್ವಭಾವ ಪರಸ್ಪರ ಅತ್ಯಂತ ಹೋಲಿಕೆಯನ್ನು ಹೊಂದಿದೆ. ಇಬ್ಬರೂ ಒಂದೇ ರತ್ನದ ಎರಡು ತುಂಡುಗಳಿದ್ದಂತೆ ಅಥವಾ ಒಂದೇ ಮರದ ಎರಡು ಹಣ್ಣುಗಳಿದ್ದಂತೆ ಮತ್ತು ಇಬ್ಬರ ನಡುವೆ ಎಷ್ಟೊಂದು ಐಕ್ಯತೆಯಿದೆಯೆಂದರೆ, ಆಧ್ಯಾತ್ಮಿಕ ದೃಷ್ಟಿಯಲ್ಲಿ ಅತಿ ಸೂಕ್ಷ್ಮವಾದ ವ್ಯತ್ಯಾಸ ಮಾತ್ರವಿದೆ ಹಾಗೂ ಬಾಹ್ಯವಾಗಿಯೂ ಒಂದು ಹೋಲಿಕೆಯಿದೆ. ಅದೇನೆಂದರೆ, ಈಸಾ ಮಸೀಹ್(ಅ) ಒಬ್ಬ ಪರಿಪೂರ್ಣ ಮತ್ತು ಮಹೋನ್ನತ ಪ್ರವಾದಿಯಾದ ಮೂಸಾ(ಅ)ರ ಅನುಯಾಯಿ ಮತ್ತು ಅವರ ಧರ್ಮದ ಸೇವಕರಾಗಿದ್ದರು. ಈಸಾ ಮಸೀಹರ ಇಂಜೀಲ್ ತೌರಾತಿನ ಶಾಖೆಯಾಗಿತ್ತು. ನಾನು ಸಹ ಪ್ರವಾದಿಗಳ ಸರದಾರ ಮತ್ತು ಎಲ್ಲ ಪ್ರವಾದಿಗಳ ಕಿರೀಟವಾಗಿರುವ ಆ ಮಹೋನ್ನತ ಪ್ರವಾದಿ ಮುಹಮ್ಮದ್(ಸ)ರ ಅತ್ಯಂತ ಕೆಳಮಟ್ಟದ ಸೇವಕರಲ್ಲಿ ಒಬ್ಬನಾಗಿದ್ದೇನೆ.

ಒಮ್ಮೆ ಓರ್ವ ವ್ಯಕ್ತಿಯು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಹೀಗೆ ಹೇಳಿದರು: ನೀವು 'ಹಖೀಖತುಲ್ ವಹೀ' ಗ್ರಂಥವನ್ನು ಬರೆಯುವಾಗ ಮತ್ತು ಅದರ ಕರಡು ಪ್ರತಿಗಳನ್ನು (ಪ್ರೂಫ್) ಪದೇ ಪದೇ ಓದುವ ಸಮಯದಲ್ಲಿ ಬಹಳ ಕಷ್ಟಪಟ್ಟಿದ್ದೀರಿ, ಇದರಿಂದಾಗಿ ನಿಮ್ಮ ಆರೋಗ್ಯ ಕೂಡ ಹದಗೆಡುತ್ತಿತ್ತು. ಆದ್ದರಿಂದ ಈಗ ನೀವು ಕೆಲವು ದಿನಗಳ ಕಾಲ ಸಂಪೂರ್ಣವಾಗಿ ವಿಶ್ರಾಂತಿ ಪಡೆಯಬೇಕು. ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಉತ್ತರಿಸಿದರು: 'ನಮ್ಮ ಪರಿಶ್ರಮವಾದರೂ ಏನು? ಸಹಾಬಿಯರು ಅಲ್ಲಾಹನ ಮಾರ್ಗದಲ್ಲಿ ಅತ್ಯಂತ ಸಂತೋಷದಿಂದ ಹೇಗೆ ತಮ್ಮ ಶಿರಗಳನ್ನು ಸಮರ್ಪಿಸಿದರು ಮತ್ತು ಪರಿಶ್ರಮಪಟ್ಟರು ಎಂಬುದನ್ನು ನೋಡುವಾಗ ನನಗೆ ನಾಚಿಕೆಯಾಗುತ್ತದೆ.'

ಒಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾನು ನನ್ನ ಸ್ಥಾನಮಾನಗಳನ್ನು ಮಿತಿಮೀರಿ ಹೆಚ್ಚಿಸಿ ಹೇಳುತ್ತಿದ್ದೇನೆ ಎಂದು ಕೆಲವು ತಿಳುವಳಿಕೆಯಿಲ್ಲದ ಜನರು ಆಕ್ಷೇಪಿಸುತ್ತಾರೆ. ನಾನು ದೇವನ ಮೇಲೆ ಆಣೆ ಹಾಕಿ ಹೇಳುತ್ತೇನೆ, ನಾನು ಯಾವುದೇ ಹೊಗಳಿಕೆಯನ್ನು ಬಯಸುವವನಾಗಿರಬೇಕು ಮತ್ತು ನನ್ನ ಹಿರಿಮೆಯ ಪ್ರದರ್ಶನದಿಂದ ಸಂತೋಷಪಡಬೇಕು ಎಂಬುದು ನನ್ನ ಸ್ವಭಾವ ಮತ್ತು ಸಹಜಪ್ರಕೃತಿಯಲ್ಲಿಯೇ ಇಲ್ಲ. ನಾನು ಯಾವಾಗಲೂ ವಿನಯ ಮತ್ತು ಯಾರೂ ನನ್ನನ್ನು ಅರಿಯದ ಜೀವನವನ್ನು ಇಷ್ಟಪಡುತ್ತಿದ್ದೆ. ಆದರೆ ದೇವನು ತಾನೇ ನನ್ನನ್ನು ಹೊರತಂದು ನನ್ನ ಮೇಲೆ ಇಳಿಸಲ್ಪಟ್ಟ ತನ್ನ ದಿವ್ಯವಾಣಿಯಲ್ಲಿ ಎಷ್ಟೆಲ್ಲ ನನ್ನ ಹೊಗಳಿಕೆ ಮತ್ತು ಹಿರಿಮೆಯನ್ನು ವ್ಯಕ್ತಪಡಿಸಿದ್ದಾನೋ, ಅದು ನನ್ನ ಅಧಿಕಾರ ಮತ್ತು ಶಕ್ತಿಯಿಂದ ಹೊರತಾಗಿತ್ತು. ಈ ಎಲ್ಲ ಹೊಗಳಿಕೆ ಮತ್ತು ಹಿರಿಮೆ ಹಝ್ರತ್ ಪೈಗಂಬರ್(ಸ)ರಿಗೆ ಸೇರಿದ್ದಾಗಿದೆ.

ಆಸ್ಟ್ರೇಲಿಯಾದ ಓರ್ವ ನವ ಮುಸ್ಲಿಮ್ ಮುಹಮ್ಮದ್ ಅಬ್ದುಲ್ ಹಕ್ ಸಾಹಿಬ್‌ರೊಡನೆ ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು: ನಾವು ಸರಳ ಜೀವನವನ್ನು ನಡೆಸುತ್ತೇವೆ ಎಂಬುದು ನಮ್ಮ ತತ್ವಗಳಲ್ಲಿ ಒಂದಾಗಿದೆ. ಇಂದಿನ ಕಾಲದಲ್ಲಿ ಯುರೋಪಿಯನರು ಜೀವನದ ಅವಶ್ಯಕತೆಗಳಾಗಿ ಮಾಡಿಕೊಂಡಿರುವ ಎಲ್ಲ ಆಡಂಬರಗಳಿಂದ ನಮ್ಮ ವಾತಾವರಣ ಮುಕ್ತವಾಗಿದೆ. ನಾವು ಕೆಟ್ಟ ಸಂಪ್ರದಾಯ ಮತ್ತು ಪದ್ಧತಿಗಳಿಗೆ ಬದ್ಧರಾಗಿಲ್ಲ... ತಿನ್ನುವುದು, ಕುಡಿಯುವುದು ಇತ್ಯಾದಿ ಎಲ್ಲ ಕಾರ್ಯಗಳಲ್ಲಿ ನಾವು ಸರಳ ಜೀವನವನ್ನು ಇಷ್ಟಪಡುತ್ತೇವೆ.

ಒಂದು ಕಡೆ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ವಿನಯವನ್ನು ಕೈಗೊಳ್ಳಬೇಕು. ವಿನಯವನ್ನು ಕಲಿಯುವುದು ಕಷ್ಟವಲ್ಲ, ಅದರಲ್ಲಿ ಕಲಿಯುವುದೇನಿದೆ? ಮನುಷ್ಯನು ಸ್ವತಃ ದುರ್ಬಲನಾಗಿದ್ದಾನೆ ಮತ್ತು ಅವನನ್ನು ವಿನಯಕ್ಕಾಗಿಯೇ ಸೃಷ್ಟಿಸಲಾಗಿದೆ. ಸ್ವತಃ ತನ್ನನ್ನು ಎಲ್ಲರಿಗಿಂತ ಕೀಳು ಮತ್ತು ಚಿಕ್ಕವರೆಂದು ಭಾವಿಸುವ ಮತ್ತು ನಾಚಿಕೆಯಿಂದ ಮಾತನಾಡುವ... ಮತ್ತು ನಮ್ರತೆಯಿಂದ ನಡೆಯುವ ಜನರು ಭಾಗ್ಯವಂತರು. ಆದ್ದರಿಂದ ಅಂತಹ ಜನರಿಗಾಗಿಯೇ ಮುಕ್ತಿಯನ್ನು ಸಿದ್ಧಪಡಿಸಲಾಗಿದೆ ಎಂದು ನಾನು ಹೇಳುತ್ತಿರುತ್ತೇನೆ.

(ಹುಝೂರ್ ಹೇಳಿದರು:) ಕೆಲವು ಜನರು ಜಲ್ಸದ ದಿನಗಳಲ್ಲಿ ಮುಂಭಾಗದ ಕುರ್ಚಿಗಳಲ್ಲಿ ಕುಳಿತುಕೊಳ್ಳಲು ಅಥವಾ ಗ್ರೀನ್ ಏರಿಯಾದಲ್ಲಿ ಕುಳಿತುಕೊಳ್ಳಲು ಬಯಸುತ್ತಾರೆ. ಖಲೀಫರ ಮಾತನ್ನು ಹತ್ತಿರದಿಂದ ಕೇಳಲು ಈ ಆಸೆ ಇರುವುದಾದರೆ ಅದು ಸರಿಯೇ; ಆದರೆ ಕೆಲವೊಮ್ಮೆ ಇದರಲ್ಲಿ ಅಹಂಕಾರ ಕೂಡ ಸೇರಿಕೊಳ್ಳುತ್ತದೆ. ಅದು ಇರಬಾರದು. ಏಕೆಂದರೆ ಇದರಿಂದ ನಿರ್ವಾಹಕರಿಗೆ ತೊಂದರೆಗಳು ಉಂಟಾಗುತ್ತವೆ. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಎಲ್ಲಿಗಾದರೂ ಹೋದರೆ ತನಗಾಗಿ ಅತ್ಯಂತ ಕೆಳಗಿನ ಜಾಗವನ್ನು ಆರಿಸಿಕೊಳ್ಳಬೇಕು. ಆತ ಬೇರೆ ಜಾಗಕ್ಕೆ ಯೋಗ್ಯನಾಗಿದ್ದರೆ ಆತಿಥೇಯರು ಸ್ವತಃ ಆತನನ್ನು ಕರೆದು ಆತನಿಗೆ ಜಾಗ ನೀಡುವರು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಮನುಷ್ಯನಲ್ಲಿ ಎರಡು ಗುಣಗಳು ಉಂಟಾಗುವ ವರೆಗೆ ಆತನು ದೈವಿಕ ಸ್ನೇಹ ಮತ್ತು ದೈವಿಕ ಸಂಪ್ರೀತಿಯನ್ನು ಪಡೆಯಲು ಸಾಧ್ಯವಿಲ್ಲ. ಮೊದಲನೆಯದು ಅಹಂಕಾರವನ್ನು ಕೊನೆಗೊಳಿಸಬೇಕು. ಎರಡನೆಯದು, ಕೊಳಕು ಮತ್ತು ದೇವನ ಅಸಮಾಧಾನಕ್ಕೆ ಕಾರಣವಾಗಿದ್ದ ಅವನ ಎಲ್ಲ ಹಿಂದಿನ ಸಂಬಂಧಗಳು ಸಂಪೂರ್ಣವಾಗಿ ಕಡಿದು ಹೋಗಬೇಕು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಬೈಅತಿನ ಜೊತೆಗೆ ಸ್ವಾರ್ಥ ಮನೋಭಾವವನ್ನು ಹೊಂದಿರುವವನು ಎಂದಿಗೂ ಅನುಗ್ರಹವನ್ನು ಗಳಿಸಲಾರ. ನೀವು ಎಷ್ಟು ಸೌಮ್ಯತೆಯನ್ನು ಕೈಗೊಳ್ಳುತ್ತೀರೋ ಮತ್ತು ಎಷ್ಟು ವಿನಯ ಹಾಗೂ ನಮ್ರತೆಯನ್ನು ತೋರುತ್ತೀರೋ ಅಲ್ಲಾಹನು ನಿಮ್ಮೊಡನೆ ಅಷ್ಟೇ ಸಂಪ್ರೀತನಾಗುತ್ತಾನೆ. ನಿಸ್ಸಾರ ಸೃಷ್ಟಿಯಾಗಿರುವ ಮನುಷ್ಯನು ತನ್ನ ಕೆಟ್ಟ ಕರ್ಮಗಳ ಕಾರಣದಿಂದ ತನ್ನನ್ನು ಸ್ವತಃ ದೊಡ್ಡವನೆಂದು ಭಾವಿಸಲು ಪ್ರಾರಂಭಿಸುತ್ತಾನೆ. ಈ ದುಷ್ಕೃತ್ಯಗಳೇ ಹಿರಿಮೆಯ ಮನೋಭಾವವನ್ನು ಉಂಟುಮಾಡುತ್ತದೆ. ಅವನಲ್ಲಿ ಅಹಂಕಾರ ಮತ್ತು ಗರ್ವ ಬರುತ್ತದೆ. ದೇವನ ಮಾರ್ಗದಲ್ಲಿ ಮನುಷ್ಯನು ತನ್ನನ್ನು ಸ್ವತಃ ಎಲ್ಲರಿಗಿಂತ ಚಿಕ್ಕವನೆಂದು ಭಾವಿಸುವ ತನಕ ಮುಕ್ತಿಯನ್ನು ಪಡೆಯಲು ಸಾಧ್ಯವಿಲ್ಲ.

ವಿನಯವನ್ನು ಅಳವಡಿಸಿಕೊಳ್ಳಲು ಉಪದೇಶಿಸುತ್ತಾ ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳುತ್ತಾರೆ: ತಮ್ಮ ಇಷ್ಟಕ್ಕೆ ವಿರುದ್ಧವಾದ ಸಣ್ಣ ಮಾತನ್ನು ಕೇಳಿದರೆ ಕೂಡ ಕೋಪ ಬರುವ ಅನೇಕ ಜನರು ಜಮಾಅತ್‌ನಲ್ಲಿ ಈಗಲೂ ಇದ್ದಾರೆ. ಆದರೆ ಸ್ವಭಾವದಲ್ಲಿ ಸಹನೆ ಮತ್ತು ಸೌಮ್ಯತೆ ಉಂಟಾಗಲು ಇಂತಹ ಎಲ್ಲ ಆವೇಶಗಳನ್ನು ಕೊನೆಗೊಳಿಸುವುದು ಬಹಳ ಮುಖ್ಯ. ಸಣ್ಣ ಸಣ್ಣ ಮಾತಿಗೆ ವಾಗ್ವಾದ ಶುರುವಾಗುತ್ತದೆ. ಪರಸ್ಪರ ಸೋಲಿಸುವ ಮತ್ತು ನಾನು ಹೇಗೆ ಜಯಿಸಬಲ್ಲೆ ಎಂಬ ಯೋಚನೆಯಲ್ಲಿರುವುದನ್ನು ಕಾಣಬಹುದಾಗಿದೆ. ಇಂತಹ ಸಂದರ್ಭಗಳಲ್ಲಿ ಕೋಪದಿಂದ ದೂರವಿರಬೇಕು ಮತ್ತು ಜಗಳವನ್ನು ಪರಿಹರಿಸಲು ಸಣ್ಣ ಸಣ್ಣ ವಿಷಯಗಳಲ್ಲಿ ಉದ್ದೇಶಪೂರ್ವಕವಾಗಿಯೇ ಸ್ವತಃ ಅವಮಾನವನ್ನು ಸ್ವೀಕಾರ ಮಾಡಬೇಕು. ಪೈಪೋಟಿಯಲ್ಲಿ ತನ್ನ ಸಹೋದರನನ್ನು ಅವಮಾನಿಸಲು ಎಂದಿಗೂ ಪ್ರಯತ್ನಿಸಬಾರದು.

(ಹುಝೂರ್ ಹೇಳಿದರು:) ನಾವು ನೋಡುವುದಾದರೆ, ನಮ್ಮ ಜೀವನದಲ್ಲಿ ಈ ಸುಳ್ಳು ಪ್ರತಿಷ್ಠೆಯನ್ನು ಹೊಂದಿರುವ ಮತ್ತು ಅಹಂಕಾರವಿರುವ ಅನೇಕ ಜನರಿದ್ದಾರೆ, ಇದರಿಂದಾಗಿ ಜಗಳಗಳು ಕೂಡ ಹೆಚ್ಚಾಗುತ್ತವೆ, ಆದರೆ ಅಲ್ಲಾಹನ ಸಾಮೀಪ್ಯವನ್ನು ಪಡೆಯಬೇಕಾದರೆ, ಇದರಿಂದ ಮುಕ್ತಿ ಪಡೆಯಬೇಕಾಗುವುದು. ಕೆಲವರಾದರೋ ಇತರರಿಗೆ ನಷ್ಟ ಉಂಟುಮಾಡಲು ಪ್ರಯತ್ನಿಸುತ್ತಾರೆ. ಕೆಲವೊಮ್ಮೆ ತಪ್ಪು ರೀತಿಯ ದೂರು ನೀಡುತ್ತಾರೆ. ಅವರು ಹೇಳುತ್ತಾರೆ: ನಮ್ಮ ಇಂತಿಂತಹ ಜಗಳವಾಗಿತ್ತು, ಆಗ ಆತ ನನ್ನನ್ನು ಕೆಟ್ಟದಾಗಿ ಬೈದಿದ್ದನು, ಆದ್ದರಿಂದ ಈಗ ನಾನು ಆತನನ್ನು ಯಾವುದಾದರೂ ತಪ್ಪು ರೀತಿಯಲ್ಲಿ ಸುಳ್ಳು ಮೊಕದ್ದಮೆಯಲ್ಲಿ ಅಥವಾ ಯಾವುದಾದರೂ ಶಿಕ್ಷೆಯಲ್ಲಿ ಸಿಲುಕಿಸಲು ಪ್ರಯತ್ನಿಸುತ್ತೇನೆ ಎಂದು ಕೆಲವರು ಭಾವಿಸುತ್ತಾರೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಹಂಕಾರಿಯು ದೇವನ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಬಯಸುತ್ತಾನೆ. ಆದ್ದರಿಂದ ಈ ಕೆಟ್ಟ ಗುಣದಿಂದ ಯಾವಾಗಲೂ ಅಭಯವನ್ನು ಬೇಡಿರಿ. ದೇವನ ಎಲ್ಲ ವಾಗ್ದಾನಗಳು ನಿಮ್ಮೊಂದಿಗಿದ್ದರೆ ಕೂಡ ವಿನಯವನ್ನು ಕೈಗೊಳ್ಳಿರಿ. ಏಕೆಂದರೆ ವಿನಯವಂತನೇ ದೇವನ ಪ್ರೀತಿಪಾತ್ರನಾಗುತ್ತಾನೆ.

ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಹೀಗೆ ಕೇಳಲಾಯಿತು: ಹುಝೂರ್, ಎಲ್ಲ ಪ್ರವಾದಿಗಳು ಆಡುಮೇಕೆಗಳನ್ನು ಮೇಯಿಸಿದ್ದಾರೆ ಎಂದು ಹದೀಸ್‌ನಲ್ಲಿ ಬರೆಯಲಾಗಿದೆ. ನೀವು ಎಂದಾದರೂ ಮೇಯಿಸಿದ್ದೀರಾ? ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಹೌದು, ಒಮ್ಮೆ ನಾನು ಹೊರಗೆ ಹೊಲಕ್ಕೆ ಹೋದಾಗ ಅಲ್ಲಿ ಒಬ್ಬ ವ್ಯಕ್ತಿ ಆಡುಗಳನ್ನು ಮೇಯಿಸುತ್ತಿದ್ದನು. ನಾನೊಂದು ತುರ್ತು ಕೆಲಸಕ್ಕಾಗಿ ಹೋಗುತ್ತಿದ್ದೇನೆ, ನೀವು ಸ್ವಲ್ಪ ನನ್ನ ಆಡುಗಳನ್ನು ನೋಡಿಕೊಳ್ಳಿ ಎಂದು ಆತ ಹೇಳಿದನು. ಆದರೆ ಆತ ಸಂಜೆ ಆಗುವ ತನಕ ಹಿಂತಿರುಗಲಿಲ್ಲ. ಆತ ಮರಳಿ ಬರುವ ವರೆಗೂ ನಾನು ಆತನ ಆಡುಗಳನ್ನು ಮೇಯಿಸಬೇಕಾಯಿತು.

ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಮನೆಯ ಯಾವುದೇ ಕೆಲಸವನ್ನು ಮಾಡಲು ಎಂದಿಗೂ ಹಿಂಜರಿಕೆಯಿರಲಿಲ್ಲ. ಮಂಚಗಳನ್ನು ತಾವೇ ಹಾಕುತ್ತಿದ್ದರು, ಹಾಸಿಗೆಯನ್ನು ತಾವೇ ಹಾಸುತ್ತಿದ್ದರು. ಎಂತಹ ಊಟವಿದ್ದರೂ ತಿನ್ನುತ್ತಿದ್ದರು. ಅವರು ಎಂದಿಗೂ ಯಾರನ್ನು ಕೂಡ 'ನೀನು' ಎಂದು ಹೇಳಿ ಕರೆಯುತ್ತಿರಲಿಲ್ಲ, ಯಾವಾಗಲೂ ಗೌರವಪೂರ್ವಕವಾಗಿ ಕರೆಯುತ್ತಿದ್ದರು. ಅಹಂಕಾರ ಎಂಬುದು ಅವರಿಗೆ ಕಿಂಚಿತ್ತೂ ಇದ್ದಿರಲಿಲ್ಲ.

ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲವಿ ಸಾಹಿಬ್ ಹೊಸದಾಗಿ ದೆಹಲಿಯಿಂದ ಕಲಿಕೆ ಮುಗಿಸಿ ಬಂದಾಗ, ಆ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಒಂದು ಚರ್ಚೆ ನಡೆಯಿತು. ಆಗ ಆರಂಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಮೌಲ್ವಿ ಸಾಹಿಬ್‌ರ ನಂಬಿಕೆಗಳ ಬಗ್ಗೆ ಕೇಳಿದರು. ಮೌಲ್ವಿ ಸಾಹಿಬ್ ತಮ್ಮ ನಂಬಿಕೆಗಳನ್ನು ತಿಳಿಸಿದಾಗ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದರು: 'ನಿಮ್ಮ ನಂಬಿಕೆಗಳಲ್ಲಿ ನಾನು ಯಾವುದೇ ಆಕ್ಷೇಪಾರ್ಹ ವಿಷಯವನ್ನು ಕಾಣುತ್ತಿಲ್ಲ, ಆದ್ದರಿಂದ ನಿಮ್ಮೊಂದಿಗೆ ಚರ್ಚೆಯ ಅಗತ್ಯವಿಲ್ಲ.' ಹಝ್ರತ್ ಮಸೀಹ್ ಮೌಊದ್(ಅ)ರನ್ನು ಕರೆದುಕೊಂಡು ಹೋದವರು, ಈ ರೀತಿಯಿಂದ ನಮಗೆ ಅವಮಾನವಾಯಿತಲ್ಲಾ ಎಂದು ಬಹಳ ಚಿಂತೆಗೀಡಾದರು. ಆದರೆ ಹಝ್ರತ್ ಮಸೀಹ್ ಮೌಊದ್(ಅ) ಸುಳ್ಳು ಪ್ರತಿಷ್ಠೆಯ ಬಗ್ಗೆ ಸ್ವಲ್ಪ ಕೂಡ ತಲೆಕೆಡಿಸಿಕೊಳ್ಳಲಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಸ್ವತಃ ಹೀಗೆ ಹೇಳಿದರು: ಮೌಲ್ವಿ ಸಾಹಿಬ್‌ರ ನಂಬಿಕೆಗಳನ್ನು ಕೇಳಿ, ಅವುಗಳಲ್ಲಿ ಯಾವುದೇ ಆಕ್ಷೇಪಾರ್ಹ ವಿಷಯವಿಲ್ಲದ ಕಾರಣ, ಕೇವಲ ದೇವನಿಗಾಗಿ ಚರ್ಚೆಯನ್ನು ಕೈಬಿಡಲಾಯಿತು. ಆ ರಾತ್ರಿ ಅಲ್ಲಾಹನು ದಿವ್ಯವಾಣಿಯ ಮೂಲಕ ಹೀಗೆ ಹೇಳಿದನು: 'ನಿನ್ನ ದೇವನು ನಿನ್ನ ಈ ಕಾರ್ಯದಿಂದ ಪ್ರಸನ್ನನಾಗಿದ್ದಾನೆ ಮತ್ತು ಅವನು ನಿನಗೆ ಎಷ್ಟೊಂದು ಅನುಗ್ರಹಗಳನ್ನು ನೀಡುವನು ಎಂದರೆ, ಅರಸರು ನಿನ್ನ ಬಟ್ಟೆಗಳಿಂದ ಅನುಗ್ರಹವನ್ನು ಹುಡುಕುವರು.'

ಹಝ್ರತ್ ಮಸೀಹ್ ಮೌಊದ್(ಅ) ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲವಿ ಸಾಹಿಬ್‌ರಿಗೆ ಬರೆದ ಪತ್ರವೊಂದರಲ್ಲಿ ಅತ್ಯಂತ ವಿನಯವನ್ನು ವ್ಯಕ್ತಪಡಿಸಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಬರೆದಿದ್ದರು: 'ನಾನೊಬ್ಬ ಅಜ್ಞಾನಿ ಮತ್ತು ಅರಿವಿಲ್ಲದ ಮನುಷ್ಯ, ಆರಾಧನೆಯೂ ಇಲ್ಲ, ದೇವನ ಮಾರ್ಗದಲ್ಲಿ ಪ್ರಯತ್ನವೂ ಇಲ್ಲ. ಜ್ಞಾನವೂ ಇಲ್ಲ, ಅರ್ಹತೆಯೂ ಇಲ್ಲ. ಒಟ್ಟಿನಲ್ಲಿ ಏನೂ ಇಲ್ಲ. ದೇವನ ಕಡೆಯಿಂದ ಒಂದು ಆದೇಶವಿತ್ತು. ಅದು ಖಚಿತ ಹಾಗೂ ನಿಶ್ಚಿತವಾಗಿತ್ತು, ಅದನ್ನು ನಾನು ತಲುಪಿಸಿದ್ದೇನೆ. ಒಪ್ಪುವುದು ಬಿಡುವುದು ಅವರವರ ಅಭಿಪ್ರಾಯ ಮತ್ತು ತಿಳುವಳಿಕೆಗೆ ಬಿಟ್ಟದ್ದಾಗಿದೆ.'

ತಾನು ಸದೃಶ ಮಸೀಹ್ (ಈಸಾ ಮಸೀಹ್‌ರಿಗೆ ಹೋಲಿಕೆ ಹೊಂದಿರುವ ವ್ಯಕ್ತಿ ಆಗಿರುವೆನು) ಎಂದು ಹಝ್ರತ್ ಮಸೀಹ್ ಮೌಊದ್(ಅ) ವಾದಿಸಿದಾಗ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲವಿ ತೀವ್ರವಾಗಿ ವಿರೋಧಿಸಿದರು. ಅತ್ಯಂತ ಅಸಭ್ಯ ಪತ್ರಗಳನ್ನು ಬರೆದರು. ತನ್ನ 'ಇಶಾಅತುಸ್ಸುನ್ನಾ' ಪತ್ರಿಕೆಯಲ್ಲಿಯೂ ಹಝ್ರತ್ ಮಸೀಹ್ ಮೌಊದ್(ಅ)ರ ಬಗ್ಗೆ ಅಸಭ್ಯ ಪದಗಳನ್ನು ಬಳಸಲು ಪ್ರಾರಂಭಿಸಿದರು. ಇದೆಲ್ಲದರ ಹೊರತಾಗಿಯೂ ಹಝ್ರತ್ ಮಸೀಹ್ ಮೌಊದ್(ಅ) ಸಹನೆ, ತಾಳ್ಮೆ, ವಿನಯ ಮತ್ತು ನಮ್ರತೆಯ ಅತ್ಯಂತ ಉನ್ನತ ಮಾದರಿಯನ್ನು ತೋರಿದರು.

ಒಂದು ಪತ್ರದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲವಿ ಸಾಹಿಬ್‌ರಿಗೆ ಹೀಗೆ ಬರೆದರು: ನನಗೆ ಜಯ ಮತ್ತು ಸೋಲಿನೊಂದಿಗೆ ಯಾವುದೇ ಸಂಬಂಧವಿಲ್ಲ, ಬದಲಾಗಿ ದೇವನ ದಾಸನಾಗಿರುವುದು ಹಾಗೂ ಆದೇಶ ಪಾಲನೆ ಮತ್ತು ಅನುಸರಣೆ ನನ್ನ ಉದ್ದೇಶವಾಗಿದೆ. ಈ ಭಿನ್ನಾಭಿಪ್ರಾಯದಲ್ಲಿ (ಮೌಲ್ವಿ ಸಾಹಿಬ್) ಒಳ್ಳೆಯ ಉದ್ದೇಶವನ್ನು ಹೊಂದಿರುವಿರಿ ಎಂದು ನಾನು ಭಾವಿಸುತ್ತೇನೆ, ಆದರೆ ನನ್ನ ಪ್ರಕಾರ, ನೀವು ಮೊದಲು ನನ್ನೊಂದಿಗೆ ಮಾತನಾಡಿರಿ ಹಾಗೂ 'ಫತ್‌ಹೇ ಇಸ್ಲಾಮ್', 'ತೌಝೀಹೇ ಮರಾಮ್', 'ಇಝಾಲೆ ಔಹಾಮ್' ಎಂಬ ನನ್ನ ಮೂರು ಗ್ರಂಥಗಳನ್ನು ಓದಿದ ನಂತರ ಏನಾದರೂ ಬರೆಯುವುದು ಉತ್ತಮ. ನಿಮ್ಮಂತಹ ಸ್ನೇಹಿತರು ವಿರೋಧಿಸಲು ಸಿದ್ಧರಾಗಿರುವ ಬಗ್ಗೆ ನನಗೆ ಯಾವುದೇ ದುಃಖ ಮತ್ತು ಬೇಸರವಿಲ್ಲ. ಈ ಅಭಿಪ್ರಾಯಭೇದವೂ ಸತ್ಯಕ್ಕಾಗಿಯೇ ಆಗಿರಬಹುದು.

ಮತ್ತೊಂದು ಪತ್ರದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಮೌಲ್ವಿ ಸಾಹಿಬ್‌ರಿಗೆ ಹೀಗೆ ಬರೆದಿದ್ದಾರೆ: ನನ್ನ ಪ್ರಕಾರ, ನೈತಿಕತೆಯ ಎಲ್ಲ ಸಾಧನೆಗಳಲ್ಲಿ, ಅಹಂಕಾರಕ್ಕೆ ವಿರುದ್ಧವಾಗಿರುವಂತಹ ವಿನಯ, ನಮ್ರತೆ ಮತ್ತು ಸೌಮ್ಯತೆಯನ್ನು ದೇವನು ಇಷ್ಟಪಡುವಷ್ಟು, ನೈತಿಕತೆಯ ಬೇರೆ ಯಾವುದೇ ವಿಭಾಗವನ್ನು ಅವನು ಇಷ್ಟಪಡುವುದಿಲ್ಲ.

(ಹುಝೂರ್ ಹೇಳಿದರು:) ಹಝ್ರತ್ ಮಸೀಹ್ ಮೌಊದ್(ಅ)ರ ಪ್ರತಿಯೊಂದು ಮಾತು ಮತ್ತು ಕಾರ್ಯವು ವಿನಯವನ್ನು ವ್ಯಕ್ತಪಡಿಸುತ್ತಿತ್ತು. ದೇವನ ಸಂಪ್ರೀತಿಯನ್ನು ಪಡೆಯುವುದು ಮತ್ತು ಅವನ ಏಕತೆಯನ್ನು ಲೋಕದಲ್ಲಿ ಹರಡುವುದು ಎಂಬ ಒಂದೇ ಒಂದು ಹಂಬಲ ಅವರಿಗೆ ಇತ್ತು. ಹಝ್ರತ್ ಮಸೀಹ್ ಮೌಊದ್(ಅ) ನಮಗೂ ಇದೇ ಉಪದೇಶವನ್ನು ನೀಡಿದ್ದಾರೆ. ಅಲ್ಲಾಹನು ನಮಗೆ ಈ ವಿಷಯಗಳನ್ನು ಪಾಲಿಸಲು ಸೌಭಾಗ್ಯವನ್ನು ದಯಪಾಲಿಸಲಿ.

——————————*****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak',*** *Islamabad, Tilford,* U.K. On 29-05-2026

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon